# ಅಧ್ಯಾಯ-೧

# ಪೀಠಿಕೆ

# ೧.ಪೀಠಿಕೆ

ಮಾನವ ಪ್ರಾಣಿ ಪ್ರಪಂಚದಲ್ಲಿ ಬಹು ವಿಶಿಷ್ಟತೆಯನ್ನು ಗಳಿಸಿಕೊಂಡಿರುವವನು. ಈತನು ವಿಭಿನ್ನ ಗುಣಲಕ್ಷಣಗಳು, ನಡೆ-ನುಡಿಗಳು, ಆಚಾರ-ವಿಚಾರಗಳು, ವೃತ್ತಿ, ಪ್ರವೃತ್ತಿಗಳಿಂದ ವೈವಿಧ್ಯಮಯ ಬದುಕನ್ನು ಸಾಗಿಸುವನು. ಈ ಬದುಕನ್ನು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸೆರೆಹಿಡಿಯಲಾಗಿದೆ. ಹಾಗಾಗಿ ಮಾನವನ ಬದುಕೇ ಸಾಹಿತ್ಯದ ಮೂಲ. ಜನ ಸಮೂಹದ ಬದುಕಿನ ಕನ್ನಡಿಯಾದ ಸಾಹಿತ್ಯ ಬಾಳಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ನೆರವಾಗುತ್ತದೆ. ಈ ತೆರನಾದ ಕನ್ನಡ ಸಾಹಿತ್ಯ ಚರಿತ್ರೆ ಸುದೀರ್ಘವೂ, ಮೌಲ್ಯಭರಿತವೂ ಆಗಿದೆ. ಕನ್ನಡ ಸಾಹಿತ್ಯ ಕಾಲದಿಂದ ಕಾಲಕ್ಕೆ ಬೆಳೆಯುತ್ತಾ, ಕನ್ನಡಿಗರ ನಡೆ-ನುಡಿಗಳನ್ನು, ಆಚಾರ-ವಿಚಾರಗಳನ್ನು ದಾಖಲಿಸುತ್ತಾ ಆ ಮೂಲಕ ಶ್ರೀಮಂತ ವ್ಯಕ್ತಿತ್ವಕ್ಕೆ, ಆದರ್ಶ ಬದುಕಿಗೆ ದಾರಿದೀಪವಾಗಿದೆ. ಹೀಗೆ ಬೆಳೆದು ಬಂದ ಕನ್ನಡ ಸಾಹಿತ್ಯವನ್ನು ಪಂಪಪೂರ್ವ ಕಾಲದಿಂದ ಇಂದಿನವರೆಗೆ ಅವಲೋಕಿಸಿದರೆ ವಿಭಿನ್ನ ಸಂಸ್ಕೃತಿಗಳ ಪ್ರತಿಬಿಂಬವಾಗಿ, ಕನ್ನಡನಾಡಿನ ಸಮಗ್ರ ಸಂಸ್ಕೃತಿಯ ಸಂಕೇತವಾಗಿ, ಈ ನಾಡಿನ ಹಿರಿಮೆ-ಗರಿಮೆಯನ್ನು ಹೆಚ್ಚಿಸಿರುವ ಶ್ರೀಮಂತ ಮಾಧ್ಯಮವಾಗಿರುವುದು ಸ್ಪಷ್ಟವಾಗುತ್ತದೆ.

ಕವಿ ತನ್ನ ಸಮಕಾಲೀನ ವಿದ್ಯಮಾನಗಳನ್ನೂ ಕಲಾತ್ಮಕವಾಗಿ ದಾಖಲಿಸುತ್ತಾನೆ. ಅಂಥ ಸಾಹಿತ್ಯ ಪ್ರಾಚೀನ ಕಾಲದಿಂದಲೂ ಆಶ್ರಮ-ಅರಮನೆ-ಗುರುಮನೆಗಳಲ್ಲಿ ಬೆಳೆದಿದೆ. ಈ ಮೂರು ವಲಯದವರು ಸ್ವತಃ ವಿದ್ವಾಂಸರಾಗಿ, ಕವಿಗಳಾಗಿ ಸಾಹಿತ್ಯ ರಚಿಸಿರುವುದಲ್ಲದೆ; ಪ್ರತಿಭಾವಂತರಿಗೆ ಆಶ್ರಯ ನೀಡಿ, ಸಾಹಿತ್ಯ ಕೃಷಿಗೆ ಪ್ರೋತ್ಸಾಹಿಸಿ, ಸಹಕರಿಸಿದರು. ಜೊತೆಗೆ ಇದು ತಮ್ಮ ಜೀವನದ ಆದ್ಯಕರ್ತವ್ಯವೆಂದು ಭಾವಿಸಿದರು. ಹಾಗಾಗಿಯೇ ಸಮೃದ್ಧವಾಗಿ ಸಾಹಿತ್ಯ ಬೆಳೆಯತೊಡಗಿತು. ಈ ನೆಲದಲ್ಲಿ ಕನ್ನಡ ಬೆಳೆಯಲು ಆರಂಭವಾಗುವ ಮುನ್ನ ವ್ಯಾಪಕ ಭಾಷೆಯಾಗಿ ಸಂಸ್ಕೃತವಿತ್ತು. ಭಾರತೀಯ ಭಾಷೆಗಳಿಗೆಲ್ಲ ಪ್ರೇರಕವೂ, ಪೋಷಕವೂ ಆಗಿರುವ ಸಂಸ್ಕೃತ ಸಾಹಿತ್ಯದ ಪ್ರಭಾವ ಕನ್ನಡದಲ್ಲೂ ದಟ್ಟವಾಗಿ ಕಂಡುಬರುತ್ತದೆ.

ಕಾವ್ಯ ಬರೆಯುವವರಿಗೆ ವಸ್ತುಗಳಿದ್ದವು. ಅದರ ಪ್ರಸಾರ, ಪ್ರಕಟಣೆಗೆ ಆಶ್ರಯ, ಪ್ರೋತ್ಸಾಹ, ಸಹಕಾರ, ಪೋಷಣೆ ಬೇಕಿತ್ತು. ಅನಿವಾರ್ಯವೂ, ಅಗತ್ಯವೂ ಆಗಿದ್ದ ರಾಜಾಶ್ರಯ ಅಂದು ದೊರೆತಿರುವುದರಿಂದಲೇ ಸಾಹಿತ್ಯ ಶ್ರೀಮಂತವಾಗಿ ಬೆಳೆದಿರುವುದು. ಶಾತವಾಹನರು,

ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯರು, ವಿಜಯನಗರದ ಅರಸರು, ಮೈಸೂರು ಒಡೆಯರು ಮೊದಲಾದವರು ಸಮೃದ್ಧವಾದ ಕನ್ನಡ ಸಾಹಿತ್ಯ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮೈಸೂರು ಅರಸರು ಕನ್ನಡದ ಬೆಳವಣಿಗೆಗೆ ಅಪೂರ್ವವೂ, ಅವಿಸ್ಮರಣೀಯವೂ ಆದ ಪ್ರೋತ್ಸಾಹವನ್ನು ನೀಡಿದ್ದಾರೆ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಚಿಕ್ಕದೇವರಾಜ ಒಡೆಯರ ಕಾಲವನ್ನು 'ಸ್ವರ್ಣಯುಗ'ವೆಂದು ಕರೆಯುವಷ್ಟರ ಮಟ್ಟಿಗೆ ಕೃತಿಗಳು ರಚನೆಯಾಗಿದ್ದವು. ಅನಂತರದಲ್ಲಿ ಸಾಹಿತ್ಯ ರಚನೆ ಸ್ವಲ್ಪ ಇಳಿಮುಖವಾದಂತೆ ಕಂಡುಬಂದರೂ; ಮುಮ್ಮಡಿಕೃಷ್ಣರಾಜ ಒಡೆಯರು ಮತ್ತು ಚಾಮರಾಜ ಒಡೆಯರ ಉದಾರವಾದ ಸಹಕಾರದಿಂದ ಕನ್ನಡ ಸಾಹಿತ್ಯವಾಹಿನಿಯು ಹಿರಿದಾಗಿ ಹರಿದು ಬಂದಿದೆ.

ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿ ಘನ ವಿದ್ವಾಂಸರೆನಿಸಿದ್ದ ಮುಮ್ಮಡಿಕೃಷ್ಣರಾಜ ಒಡೆಯರು ಸ್ವತಃ ಹಲವು ಗ್ರಂಥಗಳನ್ನು ರಚನೆಮಾಡಿದ್ದರಲ್ಲದೆ; ಪ್ರಸಿದ್ಧ ವಿದ್ವಾಂಸರು, ಕವಿಗಳು, ಶಿಲ್ಪಿಗಳು, ಸಂಗೀತಗಾರರಿಗೆ ಆಶ್ರಯದಾತರಾಗಿ ಪ್ರಾಚೀನ ಸಂಸ್ಕೃತ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿಸಿದರು. ಅನಂತರ ಅಧಿಕಾರಕ್ಕೆ ಬಂದ ಚಾಮರಾಜ ಒಡೆಯರು ಸಾಹಿತ್ಯಕ್ಕೆ ನೀಡಿದ ಪ್ರೋತ್ಸಾಹದಿಂದ ಕನ್ನಡದಲ್ಲಿ ಒಂದು ಹೊಸಯುಗದ ಅರುಣೋದಯವಾಯಿತು. ಈ ಹಿಂದೆ ಐವತ್ತು ವರ್ಷಗಳ ಕಾಲ ಮೈಸೂರು ರಾಜ್ಯ ಇಂಗ್ಲಿಷ್ ಜನರ ಆಡಳಿತಕ್ಕೆ ಒಳಪಟ್ಟದ್ದರಿಂದ ಇಂಗ್ಲಿಷ್ ಭಾಷೆಗೆ ಸ್ವಾಭಾವಿಕವಾಗಿ ಹೆಚ್ಚು ಪ್ರಾಶಸ್ತ್ಯ ದೊರೆಯಿತು. ಕನ್ನಡ ಹಿಂದೆ ಸರಿಯುವ ಸ್ಥಿತಿ ಒದಗಿತು. ಅಂತಹ ಪರಿಸ್ಥಿತಿಯಲ್ಲಿ ಇಂಗ್ಲಿಷ್ ವಿದ್ಯಾಪರಿಣತರಾದ ಕನ್ನಡ ಭಾಷಾಭಿಮಾನಿಗಳು ಕನ್ನಡದ ಪುನರುಜ್ಜೀವನ ಕಾರ್ಯಕ್ಕೆ ತೊಡಗಿದಾಗ ಚಾಮರಾಜ ಒಡೆಯರು ಅವರಿಗೆ ಸಂಪೂರ್ಣ ಸಹಕಾರವನ್ನು ನೀಡಿ ಕನ್ನಡ ಎಂದಿನಂತೆ ತಲೆಯೆತ್ತಿ ಮೆರೆಯುವಂತೆ ಮಾಡಿದರು. ಆ ಕಾಲದ ಅತ್ಯಂತ ಗಮನಾರ್ಹವಾದ ಲೇಖಕರೆಂದರೆ ಆಸ್ಥಾನ ವಿದ್ವಾನ್ ಬಸವಪ್ಪಶಾಸ್ತ್ರಿಗಳು. ಅವರು ಸ್ವತಂತ್ರ ಕೃತಿಗಳನ್ನು ರಚಿಸುವುದರ ಮೂಲಕ ಹಾಗೂ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಯ ಪ್ರಸಿದ್ಧ ಸಾಹಿತ್ಯ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸುವುದರ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.

ಅನ್ಯ ಭಾಷೆಗಳ ಪ್ರಭಾವದಿಂದ ಕನ್ನಡ ನುಡಿಯ ಅಸ್ತಿತ್ವಕ್ಕೆ ದಕ್ಕೆ ಒದಗಿದಾಗ ಶಾಸ್ತ್ರಿಗಳು ಅದರ ಪ್ರಗತಿಗಾಗಿ ಶ್ರಮಿಸಿದರು. 'ಅಭಿನವಕಾಳಿದಾಸ', 'ಕನ್ನಡ ನಾಟಕ ಪಿತಾಮಹ' ಎಂಬ

ಬಿರುದಿಗೆ ಪಾತ್ರರಾದ ಬಸವಪ್ಪಶಾಸ್ತ್ರಿಗಳ ಜೀವನ ಮತ್ತು ಅವರ ಕೃತಿಗಳ ಅಧ್ಯಯನವು ಅಂದಿನ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಶಾಸ್ತ್ರಿಗಳ ಪ್ರಕಾಂಡ ಪಾಂಡಿತ್ಯ, ನೈತಿಕ, ಆಧ್ಯಾತ್ಮಿಕ ಜೀವನ ಮತ್ತು ಅವರ ವ್ಯಕ್ತಿತ್ವದ ಅಧ್ಯಯನವು, ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳುವುದಕ್ಕೆ ಹಾಗೂ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗುತ್ತದೆ.